# ಶ್ರಾವಣ ದರ್ಶನ 11 ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಜು. 31 :** ಭೌತಿಕ ಶಾರೀರಿಕವಾಗಿ ಮಾನವ ನಿಂತುಕೊಳ್ಳುತ್ತಾನೆ. ಆದರೆ ಅವನಲ್ಲಿ ಸೈದ್ಧಾಂತಿಕವಾದ ನಿಲುವು ಎಷ್ಟೋಬಾರಿ ಸಾಧ್ಯವಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ ಮಾನವ ಅವಾಸ್ತವಿಕ ಬದುಕಿನತ್ತ ವಾಲುತ್ತಾನೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಶುಕ್ರವಾರ ನಡೆದ ಶ್ರಾವಣದರ್ಶನ 11ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ವಾಸ್ತವಿಕತೆ ಮತ್ತು ಅದು ನೀಡುವ ಸುಖ ವಿಷಯ ಕುರಿತು ಮಾತನಾಡಿದ ಶ್ರೀಗಳು, ಗಟ್ಟಿ ಬದುಕು ದೃಢತೆಯಿಂದ ಪ್ರಾಪ್ತವಾಗುತ್ತದೆ. ಭೌತಿಕ ಶಾರೀರಿಕವಾಗಿ ಮಾನವ ನಿಂತುಕೊಳ್ಳುತ್ತಾನೆ. ಆದರೆ ಸೈದ್ಧಾಂತಿಕವಾದ ನಿಲುವು ಎಷ್ಟೋಬಾರಿ ಸಾಧ್ಯವಾಗುವುದಿಲ್ಲ. ಹಾಗಾಗಿ ಮಾನವ ಕೆಲವು ಅವಾಸ್ತವಿಕ ಬದುಕಿನತ್ತ ವಾಲುತ್ತಾನೆ. ಇದು ಮಾನವ ಬದುಕಿನ ಗಂಭೀರ ಚಿಂತನೆ. ಅವಾಸ್ತವಿಕ ಬದುಕಿನಲ್ಲಿ ಒಂದಿಷ್ಟು ಕೃತ್ರಿಮತೆ ಇರುತ್ತದೆ. ನಡೆ-ನುಡಿ ಕೃತ್ರಿಮವಾಗುತ್ತದೆ. ಕೃತ್ರಿಮತೆ ಬದುಕನ್ನು ಕಾಡುತ್ತದೆ. ಅದು ನಮ್ಮನ್ನು ಯಾಂತ್ರಿಕತೆಯ ಕಡೆಗೆ ಕರೆದುಕೊಂಡು ಹೋಗುತ್ತದೆ. ಯಾರು ಯಾಂತ್ರಿಕವಾದ ಆಚಾರ ವಿಚಾರಗಳಿಗೆ ಒಳಗಾಗುತ್ತಾರೋ ಅಂತವರಿಗೆ ನಾಟಕೀಯತೆ ಪ್ರಾರಂಭವಾಗುತ್ತದೆ. ನಾಟಕೀಯತೆಯ ಮುಂದಿನ ಹಂತವೆ ಕ್ಷುದ್ರತೆ. ಜೀವನದಲ್ಲಿ ಹೊಂದುವಂತಹದ್ದು ಇದೆ; ಹೊಂದದೆ ಇರುವವುಗಳು ಇವೆ.

ಹೊಂದುವ ವಿಚಾರದಲ್ಲಿ ಅವಾಸ್ತವಿಕತೆ ವಿರುದ್ಧವಾಗಿ ವಾಸ್ತವಿಕತೆ ಇರುತ್ತದೆ. ಇದು ನಮ್ಮನ್ನು ಸಹಜತೆಯ ಕಡೆಗೆ ಕರೆದುಕೊಂಡು ಹೋಗುತ್ತದೆ. ಸಹಜವಾಗಿರುವ ಬದುಕು. ಮುಖಭಾವದಲ್ಲಿ ಚಲನವಲನಗಳಲ್ಲಿ ಎಳ್ಳಷ್ಟು ಸಿನಿಕತನ ಇರುವುದಿಲ್ಲ. ಸಹಜತೆ ಒಂದು ಮೌಲ್ಯ. ಸಂತರು, ಶರಣರು, ಶಿವಯೋಗಿಗಳು, ಆದರ್ಶ ಪುರುಷರು ಸಹಜತೆಯ ತಳಹದಿಯ ಮೇಲೆ ಬದುಕನ್ನು ಕಟ್ಟಿದರು. ಅಸಹಜತೆಯ ಸೌಧ ಒಂದು ದಿನ ಕುಸಿಯುತ್ತದೆ. ಕಾರಣ ಗುಣಮಟ್ಟದ ಚಿಂತನೆ, ಕಾಮಗಾರಿ ಇಲ್ಲದೆ ಸೌಧಗಳು ಕುಸಿಯುತ್ತವೆ. ಕೆಲವರದು ಕಳಪೆ ಕಾಮಗಾರಿಗೆ ಒಳಗಾಗುತ್ತದೆ. ಅಸಹಜತೆ ಬದುಕನ್ನು ಕಸಿಯುತ್ತದೆ. ಸಹಜತೆಯಲ್ಲಿ ಸತ್ಯಸಂಧತೆ ಇರುತ್ತದೆ. ಇದು ಸಹಜತೆಯ ಹೃದಯ.

ಸತ್ಯಸಂಧತೆಯ ಪ್ರಾಣ ಮಾನವೀಯತೆ. ಇದು ನಮ್ಮನ್ನು ನಿಜಮಾನವರನ್ನಾಗಿ ಮಾಡುತ್ತದೆ. ಮಾನವೀಯತೆ ಇರುವಲ್ಲಿ ಸಮಾನತೆ ಇರುತ್ತದೆ. ಒಂದಷ್ಟು ವೈಚಾರಿಕತೆ ಬೇಕಾಗುತ್ತದೆ. ಇದರ ಜೊತೆ ಪ್ರಾಯೋಗಿಕತೆ. ವಾಸ್ತವಿಕತೆ ತಪಸ್ಸು; ಅವಾಸ್ತವಿಕತೆ ತಮಸ್ಸು. ವಾಸ್ತವಿಕತೆ ಬೇಗನೆ ಸಿದ್ಧಿಸುವುದಿಲ್ಲ. ಅವಾಸ್ತವಿಕತೆ ನಮ್ಮನ್ನು ಕೆಲವು ಬಾರಿ ವಾಸ್ತವಿಕತೆಯ ಕಡೆ ಬಿಡುವುದಿಲ್ಲ. ಇವೆರಡರ ನಡುವೆ ಸಂಘರ್ಷಗಳು ಉಂಟಾಗುತ್ತವೆ. ಸಹಜತೆಯ ಬದುಕಿನವರ ಹತ್ತಿರ ಎಷ್ಟೇ ಕೃತ್ರಿಮ, ಯಾಂತ್ರಿಕವಾಗಿ ವರ್ತಿಸಿದರೂ ಅವರು ಅದನ್ನು ಅರ್ಥೈಸಿಕೊಳ್ಳುತ್ತಾರೆ. ನಾನು ಭಾವನೆಗಳನ್ನು ಮುಖಗಳನ್ನು ವರ್ತನೆಗಳನ್ನು ಓದುತ್ತೇನೆ.

ಜಿಜ್ಞಾಸೆಗಳು, ಚಿಂತನೆಗಳು ನಮ್ಮೊಳಗಿರಬೇಕು. ಬಸವಣ್ಣನವರು ಒಬ್ಬ ಮಾನಸಿಕ ತಜ್ಞರು. ಬೇರೆಯವರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಮಾನವನ ಒಳಗೆ ಒಂದು ಅಗೋಚರವಾದ ಸಮುದ್ರ ಇದೆ. ಏನೇನೋ ವರ್ತನೆಗಳು ಕಾಣಬರುತ್ತವೆ. ಅಂತರಂಗದ ಅಲೆಗಳು ಮುಖದ ಮೇಲೆ ಅಪ್ಪಳಿಸುತ್ತವೆ. ಒಬ್ಬ ವ್ಯಕ್ತಿ ಎಷ್ಟು ಸಹಜವಾಗಿ ಇದ್ದಾನೆ ಎಂಬುದು ಇದರ ಮೂಲಕ ನೋಡಬಹುದು. ಗೋಸುಂಬಿಯ ಹಾಗೆ ಮನುಷ್ಯನಲ್ಲಿ ಬಣ್ಣ ಬದಲಾಗುತ್ತಿರುತ್ತದೆ. ಮುಖಾರವಿಂದದಲ್ಲಿ ವ್ಯಂಗ್ಯ, ಕ್ರೋಧ, ಕುಹಕತೆ ಇರಬಾರದು; ಸಹಜತೆ ಇರಬೇಕು.

ಮಾನವನ ಒಳಗೆ ಸೂಕ್ಷ್ಮಾತಿಸೂಕ್ಷ್ಮತೆ ಇದೆ. ಈ ಲೋಕದೊಳಗೆ ಮತ್ತೆ ಅನಂತ ಲೋಕ ಇದೆ ಎಂದು ಶರಣರು ಹೇಳುತ್ತಾರೆ. ಮಾನವನ ಒಳಗೆ ದೊಡ್ಡ ಪಾತ್ರೆಯಿಂದ ಸಣ್ಣ ಪಾತ್ರೆ ಸೇರಿಸುವ ಹಾಗೆ ಆವರಣಗಳು ಇವೆ. ಮಾನವನ ಶರೀರ ಅದ್ಭುತವಾದ ಸೃಷ್ಟಿ. 72ಲಕ್ಷ ನರನಾಡಿಗಳು ಇವೆ. ಮಾನವನನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಒಂದೊಂದು ಲೋಕವು ವಿಭಿನ್ನವಾದುದು. ಎಲ್ಲವನ್ನು ಅರ್ಥಮಾಡಿಕೊಳ್ಳಬೇಕೆನ್ನುವ ಮಾನವ ತನ್ನನ್ನು ತಾನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವನ ಆಂತರ್ಯದಲ್ಲಿರುವ ವಿದ್ಯಮಾನಗಳನ್ನು ಬಿಟ್ಟುಕೊಡುವುದಿಲ್ಲ. ಅಂಥವರು ಒಪ್ಪಿಕೊಳ್ಳುವುದಿಲ್ಲ. ಮೈದುಂಬಿಕೊಂಡಿರುವ ಹಾಗೆ. ಮಾನವನ ಬದುಕಿನಲ್ಲಿ ಇಂತಹ ಅವಾಸ್ತವಿಕ ಸಂಗತಿಗಳು ಇವೆ ಏಕೆ? ಕುತಂತ್ರ, ಕಪಟ, ಕುಟಿಲ ಇವೆಲ್ಲ ಅವನ ಸಂತಾನಗಳು. ಇವೆಲ್ಲದರೊಟ್ಟಿಗೆ ಅವನು ನಿಜಮಾನವ ಎನ್ನಿಸಿಕೊಳ್ಳಬೇಕು. ಎಂತಹ ಅದ್ಭುತ.

ಮಾನವನ ಒಳಗೆ ಮರುಳನಿದ್ದಾನೆ. ಸಾಧನೆಯ ಮುಖಾಂತರವಾಗಿ ಅಂತರಂಗದಲ್ಲಿ ಅವಿತಿರುವ ಹುಚ್ಚನನ್ನು ಹೊರಗಡೆ ಹಾಕಬೇಕು. ಇದಕ್ಕೆ ಒಂದು ಸಾಧನೆ, ಸಿದ್ಧಿ ಬೇಕು. ಅವಾಸ್ತವ ಬದುಕಿಗೆ ಕಾರಣ ಅಜ್ಞಾನ. ಯಾರಿಗೆ ವಾಸ್ತವಿಕತೆ - ಅವಾಸ್ತವಿಕತೆಯ ನಡುವಿನ ಪ್ರಜ್ಞೆ ಗೊತ್ತಿರುವುದಿಲ್ಲವೋ ಅವರು ಅವಾಸ್ತವಿಕತೆ ಜೊತೆ ಸಾಗುತ್ತಾರೆ. ಯಾರಿಗೆ ಜ್ಞಾನದ ಕೊರತೆ ಇಲ್ಲವೋ ಅವರು ಸಹಜತೆಗೆ ಸಾಗುತ್ತಾರೆ. ಅಥಣಿಯ ಗಚ್ಚಿನಮಠದ ಮುರುಘೇಂದ್ರ ಶಿವಯೋಗಿಗಳು ನಿಜಾಚರಣೆಯನ್ನು ರೂಢಿಸಿಕೊಂಡಿದ್ದರು. ಎಲ್ಲ ಮಡಿಗಳನ್ನು ಮೀರಿದ್ದು ನಿಜಾಚರಣೆ. ಇದು ಪರಿಪೂರ್ಣವಾದ ಸ್ಥಿತಿ. ಇದು ಶಿವಯೋಗಿಗಳ ಬದುಕಿನಲ್ಲಿ ಸಿದ್ಧಿಸಿತ್ತು. ಅವರ ಬದುಕಿನಲ್ಲಿ ಪ್ರಾಪ್ತವಾಗಿತ್ತು. ಸುಖ ದುಃಖ ಬಂದಾಗ ಸಮನ್ವಯತೆಯಿಂದ ಸಾಧಿಸುತ್ತಿದ್ದರು. ಶಿವಯೋಗಿಗಳ ನಿಜಾಚರಣೆ, ಶರಣರ ಸಹಜ ಆಚರಣೆ. ಇವು ನಮ್ಮನ್ನು ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯುತ್ತವೆ. ನಿಜಾಚರಣೆಯಲ್ಲಿ ಸುಖ ಸಿಗುತ್ತದೆ. ಅದು ಸಹಜತೆಯ ಸುಖ. ಇದು ಅಪೂರ್ವ ಸುಖ. ಎಲ್ಲ ಭೌತಿಕತೆಯನ್ನು ಮೀರಿದ್ದು. ಶಿವಯೋಗ ಸುಖ. ಅಪರಿಮಿತವಾಗಿರುವ ಅವಿರಳವಾಗಿರುವ ಸುಖ. ಎಲ್ಲ ಸುಖಗಳನ್ನು ಲಿಂಗಾರ್ಪಿತವ ಮಾಡಬೇಕು. ನಮ್ಮ ಅಂತಃಪ್ರಜ್ಞೆಗೆ, ಸಾಕ್ಷಿಪ್ರಜ್ಞೆಗೆ, ಸಮರ್ಪಿಸುವುದರೊಂದಿಗೆ ಅಮಿತಾನಂದವನ್ನು ಪಡೆಯಬಹುದು. ಅಲ್ಲಿ ನಮಗೆ ಪರಮಾನಂದ ಸಿಗುತ್ತದೆ. ಬೌದ್ಧಿಕ ಯಾನಕ್ಕೆ ಬದುಕನ್ನು ಒಡ್ಡಿಕೊಳ್ಳೋಣ ಎಂದರು.